ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ.   3810-2022

ಸಿ.ಡಬ್ಲ್ಯೂ-03
ಪಿ.ಡಬ್ಲ್ಯೂ-03

ಸಾಕ್ಷಿದಾರನ ಹೆಸರು :-  ಬೋರಮ್ಮಾ
ಗಂಡನ ಹೆಸರು :-  ಚಿಕ್ಕತಿಮ್ಮಯ್ಯ
ವಯಸ್ಸು :-  65 ವರ್ಷ
ಉದ್ಯೋಗ :-  ವ್ಯವಸಾಯ
ವಾಸ :-  ವಡ್ಡರಾಳು

<u>ಸಾಕ್ಷಿಗೆ ದಿಃ **31.01.2024** ರಂದು ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>

2 ವರ್ಷಗಳ ಹಿಂದೆ 12 ಗಂಟೆ ಸಮಯದಲ್ಲಿ ಆರೋಪಿತರು ರೌಡಿಗಳನ್ನು ಕರೆದುಕೊಂಡು ಬಂದು ಹೊಡೆ ಬಡೆಯ ಮಾಡಿ ಚಾ,ಸಾ. 2 ಅವರ ಮನೆಯನ್ನು ಜೆ.ಸಿ ಬಿ ಯಿಂದ ಹೊಡೆದು ಹಾಕಿರುತ್ತಾರೆ.  ನಂತರ ಎಲ್ಲರೂ ಹೊರಟು ಹೊಗಿದ್ದು ನಂತರ ನಾನು ಅಲ್ಲೆ ನಿಂತಿರುವಾಗ ಆರೋಪಿ 2 ಅವರು  ನನಗೆ ಕಲ್ಲಿನಿಂದ ಕಿವಿಗೆ ಹೊಡೆದಿರುತ್ತಾರೆ. ಜಮೀನನಲ್ಲಿ ದಾರಿ ವಿಚಾರಕ್ಕೆ ಸಂಬಂಧಿಸಿದಂತೆ ಆರೋಪಿತರು ಗಲಾಟೆ ಮಾಡಿರುತ್ತಾರೆ. ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ನಂತರ ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ. ಆರೋಪಿತರನ್ನು ಗುರುತಿಸುತ್ತೇನೆ ಅವರು ಈ ದಿನ ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಊರಿನಲ್ಲಿರುತ್ತಾರೆ.

**(ಈ ಹಂತದಲ್ಲಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಬಾಗಶಃ  ಪ್ರತಿಕೂಲ ಸಾಕ್ಷಿಯೆಂದು  ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಿಲಾಗಿದೆ. )**

ಪಾಟೀ ಸವಾಲುಃ ಸಹಾಯಕ ಅಭಿಯೋಜಕರಿಂದಃ

ದಿಃ 29.03.2022 ರಂದು ಸಮಯ 12.30 ಕ್ಕೆ ಗಲಾಟೆ ಆಗಿರುತ್ತದೆ ಎಂದರೆ ಸರಿ. ಚಾ.ಸಾ. 2 ಅವರ ತೊಟ್ಟಿಯನ್ನು ಸಹ ನೆಲಸಮ ಮಾಡಿರುತ್ತಾರೆ  ಎಂದರೆ ಸರಿ. ಚಾ.ಸಾ. 1 ವುತ್ತು 2 ಯಾವ ಕಾರಣಕ್ಕೆ ನೆಲಸಮ ಮಾಡಿರುತ್ತೀರಿ ಎಂದು ಕೇಳಿದ್ದಕ್ಕೆ ಆರೋಪಿತರು ಚಾ.ಸಾ. 1 ಅವರ ಸೀರೆಯನ್ನು ಎಳೆದಾಡಿ ಅವಮಾನ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ 3 ಅವರು ಚಾ.ಸಾ. 1 ಅವರಿಗೆ ಕಲ್ಲಿನಿಂದ ಬೆನ್ನಿಗೆ ಮಂಡಿಗೆ ಮತ್ತು ಗಿನ್ನಿಗೆ

ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ 2 ಸಹ ಚಾ.ಸಾ. 1 ಅವರಿಗೆ ಕೈ ಯಿಂದ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ 1 ಮತ್ತು 2 ಅವರು ಚಾ,ಸಾ. 2 ಅವರಿಗಜಾ ಸಹ ಕಲ್ಲಿನಿಂದ ಬೆನ್ನಿಗೆ ಮತ್ತು ಸೊಂಟಕ್ಕೆ ಹೊಡೆದಿರುತ್ತಾರೆ ಎಂದರೆ ಸರಿ. ನಾನು ಕೇಳಲು ಹೋದಾಗ ಬೆ^ೋಳಿ ಮುಂಡೆ ಸುಳೇ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಎಂದರೆ ಸರಿ. ಆರೋಪಿ 6 ಅವರು ಉಳಿದ ಆರೋಪಿತರಿಗೆ ಜಮೀನು ವಿಚಾರವಾಗಿ ದಾಗಿ ಬಿಡುತ್ತಿಲ್ಲ 3 ಜನರನ್ನು ಹೊಡೆದು ಹಾಕಿ ಎಂದು ಕುಮ್ಮಕು ನೀಡಿರುತ್ತಾರೆ ಎಂದರೆ ಸರಿ. ಜೀವ ಬೆದರಿಗೆ ಹಾಕಿರುತ್ತಾರೆ ಎಂದರೆ ಸರಿ. ದಿಃ 04.04.2022 ರಂದು ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತೇನೆ ಎಂದರೆ ಸರಿ.

ಪಾಟೀ ಸವಾಲು ಕೋರಿಗೆ ಮೇರೆಗೆ ಮುಂದೊಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.
ಕುಣಿಗಲ್.